ಜೆಎಸ್‌ಎಸ್ ಮಹಾವಿದ್ಯಾಪೀಠ, ಮೈಸೂರು

# ಜೆಎಸ್‌ಎಸ್ ಮಹಿಳಾ ಕಾಲೇಜು, ಕೊಳ್ಳೇಗಾಲ.





ಕು॥ ಚಂದನ.ಬಿ ರವರು ಮೈಸೂರು ವಿಶ್ವವಿದ್ಯಾನಿಲಯ 2024-25 ನೇ ಸಾಲಿನ ಬಿ.ಎ ಪರೀಕ್ಷೆಯ ರಾಜ್ಯಶಾಸ್ತ್ರ ವಿಷಯದಲ್ಲಿ ಅತಿ ಹೆಚ್ಚು ಅಂಕಗಳಿಸಿ 106ನೇ ಘಟಿಕೋತ್ಸವದಲ್ಲಿ 1 ಚಿನ್ನದ ಪದಕ ಹಾಗೂ 2 ನಗದು ಬಹುಮಾನ ಸ್ವೀಕರಿಸುತ್ತಾರೆ, ಇವರಿಗೆ ಹೃತ್ಪೂರ್ವಕ ಅಭಿನಂದನೆಗಳು.

ಶುಭಕೋರುವವರು : ಆಡಳಿತ ಮಂಡಳಿ, ಪ್ರಾಂಶುಪಾಲರು, ಅಧ್ಯಾಪಕರು & ಅಧ್ಯಾಪಕೇತರ ವರ್ಗದವರು

# ಮಾನಸ ಗಂಗೋತ್ರಿ ಘಟಿಕೋತ್ಸವ: ಚಂದನಾಗೆ ಚಿನ್ನದ ಪದಕ

ಕರ್ನಾಟಕದೈರಿ ವಾರ್ತೆ

**ಮೈಸೂರು:** ಮಾನಸ ಗಂಗೋತ್ರಿಯ 106 ಘಟಿಕೋತ್ಸವ ಕಾರ್ಯಕ್ರಮದಲ್ಲಿ ಚಿನ್ನದ ಹುಡುಗಿ ಚಂದನ, ಹನೂರು ತಾಲೂಕಿನ ಜಿಕೆ ಹೊಸೂರು ಗ್ರಾಮದ ಬಸವಣ್ಣ ಮತ್ತು ಲತಾಮಣಿ ದಂಪತಿಗಳ ಮುದ್ದಿನ ಮಗಳು ಕುಮಾರಿ ಚಂದನ ಅವರು ಜೆಎಸ್‌ಎಸ್ ಮಹಿಳಾ ಕಾಲೇಜು ಕೊಳ್ಳೇಗಾಲ ಇಲ್ಲಿ ಬಿಎ ವ್ಯಾಸಂಗ ಮಾಡಿ, ರಾಜ್ಯಶಾಸ್ತ್ರ ವಿಷಯದಲ್ಲಿ ಮೈಸೂರು ವಿಶ್ವವಿದ್ಯಾನಿಲಯಕ್ಕೆ ಅತಿ ಹೆಚ್ಚು ಅಂಕಗಳನ್ನು ಪಡೆದು ಚಿನ್ನದ ಪದಕವನ್ನು ತನ್ನದಾಗಿಸಿಕೊಂಡಿದ್ದಾಳೆ. ಮೂಲತಹ ರೈತಾಪಿ ಕುಟುಂಬ ವರ್ಗದಿಂದ ಬಂದಂತ ಈ ಹೆಣ್ಣು ಮಗಳು ಸೋಮವಾರ ಮೈಸೂರಿನ ಮಾನಸ ಗಂಗೋತ್ರಿ ಯ 106 ನೇ ಘಟಿಕೋತ್ಸವ ಕಾರ್ಯಕ್ರಮದಲ್ಲಿ ಚಿನ್ನದ ಪದಕ ಹಾಗೂ ಎರಡು ನಗದು ಬಹುಮಾನವನ್ನು ಪಡೆದು ತನ್ನ ತಂದೆ ತಾಯಿಗಳಿಗೆ ಗ್ರಾಮಕ್ಕೆ ಹಾಗೂ ಕಾಲೇಜಿಗೆ ಕೀರ್ತಿ ತಂದಿರುತ್ತಾಳೆ. ಈ ಸಾಧನೆಗೈದ ಹುಡುಗಿಗೆ ಆಡಳಿತ ಮಂಡಳಿ,ಕಾಲೇಜಿನ ಪ್ರಾಚಾರ್ಯರು, ಅಧ್ಯಾಪಕರು ,ಹಾಗೂ ನೌಕರರ ಮಂಡಳಿ ಅಭಿನಂದಿಸಿ, ಮುಂದಿನ ದಿನಗಳಲ್ಲಿ ಉನ್ನತ ವ್ಯಾಸಂಗ ಮಾಡಿ ಇನ್ನೂ ಹೆಚ್ಚಿನ ಚಿನ್ನದ ಪದಕಗಳನ್ನು ಪಡೆಯುವಂತೆ ಹಾರೈಸಿದರು ,ಹಾಗೆ



ಆ ಹುಡುಗಿಗೆ ರಾಜ್ಯಶಾಸ್ತ್ರ ಪಾಠ ಪ್ರವಚನ ಮಾಡಿದ ಪ್ರಾಧ್ಯಾಪಕರಿಗೆ ಇದು ಒಂದು ಹೆಮ್ಮೆಯ ಸಂಗತಿ.